# 10ನೆಯ ತರಗತಿ ಮೊದಲನೆಯ ಸಂಕಲನಾತ್ಮಕ ಪರೀಕ್ಷೆ–2018

ಗರಿಷ್ಠ ಅಂಕಗಳು –100  ಪ್ರಥಮ ಭಾಷೆ ಸಿರಿ ಕನ್ನಡ  ಸಮಯ: 03–00 ಗಂಟೆಗಳು

---

## ಭಾಗ – 'ಎ'

(ಗದ್ಯ, ಪದ್ಯ, ಪೋಷಕ ಅಧ್ಯಯನ ಮತ್ತು ಅಪಠಿತ ಗದ್ಯ- 67 ಅಂಕಗಳು)

**ಕೊಟ್ಟಿರುವ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** **09x1=09**

1. ಯುದ್ಧದ ಬಗೆಗೆ ಮುದುಕಿಯು ಏನೆಂದು ಗೊಣಗಿಕೊಂಡು ಬಾಗಿಲು ತೆರೆದಳು?
2. ಶ್ರೀರಾಮನಿಗೆ ಸಮರ್ಪಿಸಲು ಶಬರಿ ಏನನ್ನು ಸಂಗ್ರಹಿಸಿದ್ದಳು?
3. ರಾಮ ಲಕ್ಷ್ಮಣರಿಗೆ ಮತಂಗಾಶ್ರಮಕ್ಕೆ ಹೋಗಲು ಸೂಚಿಸಿದವರು ಯಾರು ?
4. ಲಂಡನ್ನಿನ ಪೇಟೆಯಲ್ಲಿರುವ ಸ್ಟೇಷನರಿ ಅಂಗಡಿಯ ಹೆಸರೇನು?
5. ನಾಲ್ವಡಿ ಕೃಷ್ಣರಾಜ ಒಡೆಯರು ಯಾವುದಕ್ಕಾಗಿ ಕಂಕಣಬದ್ಧರಾದರು?
6. ಯಾವುದನ್ನು ಎಚ್ಚರದಲಿ ಮುನ್ನಡೆಸಬೇಕು?
7. ಕುಂಪಣಿ ಸರಕಾರ ಹೊರಡಿಸಿದ ಆದೇಶ ಏನು?
8. ಹಲಗಲಿ ಗ್ರಾಮ ಎಲ್ಲಿದೆ ?
9. ವಿವೇಕಾನಂದರನ್ನು **ಮಾನವ ಮಿತ್ರ** ಎಂದು ಕರೆದವರು ಯಾರು ?

**ಕೊಟ್ಟಿರುವ ಪ್ರಶ್ನೆಗಳಿಗೆ ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **10x2=20**

10. ಮಹಿಳೆಯ ಆರ್ತನಾದ ಕೇಳಿ ರಾಹಿಲನ ಮನದಲ್ಲಿ ಮೂಡಿದ ಪ್ರಶ್ನೆಗಳಾವುವು ?
11. ಲಕ್ಷ್ಮಣನು ಅಣ್ಣನನ್ನು ಹೇಗೆ ಸಂತೈಸಿದನು ?
12. ಲಂಡನ್ನಿನ ಹೆಣ್ಣು ಮಕ್ಕಳು ಯಾವ ಯಾವ ಕೆಲಸದಲ್ಲಿ ನಿಯುಕ್ತರಾಗಿರುತ್ತಾರೆ ?
13. ಶಿಕ್ಷಣದ ಬಗ್ಗೆ ವಿಶ್ವೇಶ್ವರಯ್ಯ ಅವರು ಏನೆಂದು ಹೇಳಿದ್ದಾರೆ ?
14. ಹೊಸ ಭರವಸೆಗಳನ್ನು ಮೂಡಿಸಿ ಯಾವುದರ ನಡುವೆ ಸೇತುವೆಯಾಗಬೇಕಿದೆ?
15. ಹಲಗಲಿ ಬೇಡರು ದಂಗೆ ಏಳಲು ಕಾರಣವೇನು ?
16. ಜಾತಿ ವ್ಯವಸ್ಥೆಯ ಬಗ್ಗೆ ವಿವೇಕಾನಂದರ ಅಭಿಪ್ರಾಯವೇನು ?
17. ವಿವೇಕಾನಂದರು ಚಿಕಾಗೋ ಸರ್ವಧರ್ಮ ಸಮ್ಮೇಳನದಲ್ಲಿ ಹೇಳಿದ್ದೇನು ?
18. **ವಸಂತ ಮುಖ ತೋರಲ್ಲ** ಕವನದಲ್ಲಿ ಪ್ರಕೃತಿಯ ಸಂಭ್ರಮ ಹೇಗೆ ವ್ಯಕ್ತವಾಗಿದೆ ?
19. ವಸಂತಮುಖ ಯಾರು ಯಾರಿಗೆ ತೋರಲಿಲ್ಲ?

**ಕೊಟ್ಟಿರುವ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ.** **4x3=12**

20. " ತಾಯಿ, ದಾರಿಗರಿಗೆ ಬೀಡಿಲ್ಲಿ ದೊರೆಯುವುದೇ? "
21. " ಪ್ರವಾಸವು ಶಿಕ್ಷಣದ ಒಂದು ಭಾಗವಾಗಿದೆ. "
22. " ರೆಕ್ಕೆಗಳೆರಡೂ ಪಕ್ಕದಲ್ಲುಂಟು "
23. " ಜೀವ ಸತ್ತು ಹೋಗುವುದು ಗೊತ್ತ "

**ಕೊಟ್ಟಿರುವ ಪದ್ಯಭಾಗವನ್ನು ಪೂರ್ಣಗೊಳಿಸಿರಿ.** **1x4=4**

ನೀಲಮೇಘ________________
________________________
________________________
________________________
ಹಕ್ಕಿ ಹಾರುತಿದೆ ನೋಡಿದಿರಾ?

**ಅಥವಾ**

ಯುಗ–ಯುಗಗಳ___________
________________________
________________________
________________________
ಹಕ್ಕಿ ಹಾರುತಿದೆ ನೋಡಿದಿರಾ?

**ಕೊಟ್ಟಿರುವ ಲೇಖಕರ / ಕವಿಗಳ ಕಾಲ, ಸ್ಥಳ ಮತ್ತು ಕೃತಿ ,ಪ್ರಶಸ್ತಿಯನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ.**
**2x3=6**

24. ಸಾರಾ ಅಬೂಬಕ್ಕರ್
25. ಕುಮಾರ ವ್ಯಾಸ

**ಕೊಟ್ಟಿರುವ ಪದ್ಯಭಾಗವನ್ನು ಓದಿ ಅರ್ಥೈಸಿಕೊಂಡು ಅಡಕವಾಗಿರುವ ಮೌಲ್ಯವನ್ನು ಆಧರಿಸಿ ಸಾರಾಂಶ ಬರೆಯಿರಿ.**
**1x4=4**

27. ಮತಗಳೆಲ್ಲವೂ ಪಥಗಳು ಎನ್ನುವ
ಹೊಸ ಎಚ್ಚರದೊಳು ಬದುಕೋಣ
ಭಯ– ಸಂಶಯದೊಳು ಕಂದಿದ ಕಣ್ಣೊಳು
ನಾಳಿನ ಕನಸನು ಬಿತ್ತೋಣ

**ಕೊಟ್ಟಿರುವ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **2x4=8**

28. ಅ) ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಮೈಸೂರು 'ಮಾದರಿ ಮೈಸೂರು ರಾಜ್ಯ' ಹೇಗಾಯಿತು ? ವಿವರಿಸಿ

**ಅಥವಾ**

ಆ) ವಿಶ್ವೇಶ್ವರಯ್ಯ ಅವರು ಮೈಸೂರು ದಿವಾನರಾಗಿ ಸಲ್ಲಿಸಿದ ಸೇವೆಯನ್ನು ಕುರಿತು ಬರೆಯಿರಿ.

29. ಅ) ಕರ್ಣನಿಗೆ ಕೃಷ್ಣನು ಒಡ್ಡಿದ ಆಮಿಷಗಳೇನು ?

**ಅಥವಾ**

ಆ) ಪಾಂಡವರು ಸೋದರರೆಂದು ತಿಳಿದಾಗ ಕರ್ಣನ ಮನಸ್ಥಿತಿಯನ್ನು ತಿಳಿಸಿ.

30. **ಕೊಟ್ಟಿರುವ ಗದ್ಯಭಾಗವನ್ನು ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.** **01x04=04** (2+2)

ಹನ್ನೆರಡನೆಯ ಶತಮಾನವೆಂದಾಕ್ಷಣ 'ವಚನ ಧರ್ಮ'ನಮ್ಮ ಮತಿಗೆ ಹೊಳೆಯುವುದು ಸಹಜ. ಅದಕ್ಕೆ ಕಾರಣ ಅಂದು ತನ್ನ ಉತ್ತುಂಗ ಶಿಖರವನ್ನು ತಲುಪಿತ್ತು. ವಚನ ಧರ್ಮ ಆ ಸ್ಥಿತಿಯನ್ನು ತಲುಪಲು ಮೂಲ ಕಾರಣವೇ ಶರಣರು. ಅವರ "ಸಾಮಾಜಿಕ ಚಿಂತನೆಯ ಪರಿವರ್ತನೆಯ ಪ್ರಯತ್ನದಿಂದಾಗಿ ವಚನ ಧರ್ಮ ವಿಶ್ವಮಾನ್ಯ ವಾಗುವ ಅರ್ಹತೆ"ಯನ್ನು ಪಡೆದುಕೊಂಡಿತು. 'ಸಾಹಿತ್ಯ' ಎನ್ನುವುದಕ್ಕೆ ವಚನ ಧರ್ಮ ಚಲನಶೀಲತೆಯನ್ನು ತಂದು ಕೊಟ್ಟಿತು. ಅಂದಿನ ಸಮಾಜದಲ್ಲಿದ್ದಂತಹ **ವರ್ಣವ್ಯವಸ್ಥೆಗೆ ಪೆಟ್ಟು ಕೊಟ್ಟು**, ಸಾಮಾಜಿಕ, ಆರ್ಥಿಕ, ಆಧ್ಯಾತ್ಮಿಕರಂಗದಲ್ಲಿಂದ್ದಂತಹ ಎಲ್ಲಾ ತಾರತಮ್ಯಗಳನ್ನು ತೆಗೆದೊಗೆದು, 'ಸ್ತ್ರೀ ಪುರುಷರೆಂಬ ಭೇಧ'ವನ್ನು ಅಳಿಸಿಹಾಕಿ ಎಲ್ಲಾ ವರ್ಗದ ಹಾಗೂ ಎಲ್ಲಾ ಸ್ತರದ ಜನತೆಯನ್ನು ಮುಟ್ಟುವ **ಮಾನವೀಯ ಧರ್ಮ** ವಾಯಿತು. ಇಂದಿನ **"ಆಧುನಿಕ ಜಗತ್ತಿಗೆ ಅತೀ ಪ್ರಸ್ತುತವಾಗಿರುವ ಧರ್ಮ "**ವಿದಾಗಿದೆ **"ನಮ್ಮ ರಾಷ್ಟ್ರ ಜೀವನದ ಸಂಗೀತಕ್ಕೆ ಧರ್ಮ ಶ್ರುತಿ ಇದ್ದಂತೆ"** ಎಂಬ **'ಸ್ವಾಮಿ ವಿವೇಕಾನಂದರ'** ಮಾತು ಸತ್ಯವಾದುದು. ಆಧುನಿಕ ಯುಗದಲ್ಲಿ ಈ ಪರಿಸ್ಥಿತಿಯಲ್ಲಿ, ಪ್ರತಿಯೊಂದು ಧರ್ಮದಲ್ಲಿ ನಂಬಿಕೆಯನ್ನು ಮೀರಿದ ಅಂಧ ಶ್ರದ್ಧೆ ನಡೆಯುತ್ತಲೇ ಇದೆ. ಇನ್ನೂ 800 ವರ್ಷಗಳ ಹಿಂದೆ ಅದರ ಸ್ಥಿತಿಯನ್ನು ಕಲ್ಪನೆ ಮಾಡಿಕೊಳ್ಳದ ಪರಿಸ್ಥಿತಿ ಇತ್ತು. ಇತರ ಧರ್ಮಗಳನ್ನು ಬಹಿಷ್ಕರಿಸದೆ ಅದರ ಹೆಸರಿನಲ್ಲಿ ನಡೆಯುತ್ತಿದ್ದ ವಿಷಮತೆಯ ಮುಖವಾಡವನ್ನು ಕಿತ್ತು **'ಮಾನವ ದರ್ಶನ'**ವನ್ನು ಮನೆ ಮನೆಗೆ ಕೊಂಡೊಯ್ಯುವ ಕಾರ್ಯವನ್ನು ಶರಣರು ಕೈಗೊಂಡರು ಆದ್ದರಿಂದ ಅದೊಂದು ಶರಣರ ಧರ್ಮ. **"ಧರ್ಮಾಚರಣೆ ವೈಯಕ್ತಿಕವಾಗಿರಬೇಕು, ಅದರ ಫಲ ಮಾತ್ರ ಸಾರ್ವತ್ರಿಕವಾಗಿರಬೇಕು"** ಎಂದು ಶರಣರು ಬದುಕಿದರು, ಬಾಳಿದರು.

**ಪ್ರಶ್ನೆಗಳು**

1) ವಚನ ಧರ್ಮ ಮಾನವೀಯ ಧರ್ಮವಾಗಿದ್ದು ಹೇಗೆ ?
2) ವಚನ ಧರ್ಮ ವಿಶ್ವಧರ್ಮವಾಗುವ ಅರ್ಹತೆಯನ್ನು ಪಡೆದದ್ದು ಹೇಗೆ ?

## ಭಾಗ-ಬಿ

## (ಆನ್ವಯಿಕ ವ್ಯಾಕರಣ, ಅಲಂಕಾರ, ಛಂದಸ್ಸು – 20 ಅಂಕಗಳು)

**ಕೊಟ್ಟಿರುವ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಆಯ್ಕೆಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕೊಟ್ಟಿರುವ ಜಾಗದಲ್ಲಿಯೇ ಕ್ರಮಾಕ್ಷರದೊಂದಿಗೆ ಬರೆಯಿರಿ.**

**10x1=10**

31. ವರ್ಗೀಯ ವ್ಯಂಜನದ ಕೊನೆಯ ಅಕ್ಷರಗಳು ;

(ಎ) ನುನಾಸಿಕಗಳು (ಬಿ) ಯೋಗವಾಹಗಳು (ಸಿ) ಮಹಾಪ್ರಾಣಗಳು (ಡಿ) ಸ್ವರಗಳು

32. **'ಮಳೆಗಾಲ'** ಪದದಲ್ಲಿ ಆಗಿರುವ ಸಂಧಿ;

(ಎ)ಲೋಪ ಸಂಧಿ (ಬಿ) ಆಗಮ ಸಂಧಿ (ಸಿ) ಆದೇಶ ಸಂಧಿ (ಡಿ) ಸವರ್ಣದೀರ್ಘ ಸಂಧಿ

33. ಅರ್ಥಕ್ಕನುಗುಣವಾಗಿ ಬರುವ ನಾಮಪದ ;

(ಎ) ರೂಢನಾಮ (ಬಿ) ಅಂಕಿತನಾಮ (ಸಿ) ಅನ್ವರ್ಥನಾಮ (ಡಿ) ಭಾವನಾಮ

34. **'ಕರಣಕಾರಕ '** ಹೊಂದಿರುವ ವಿಭಕ್ತಿಯ ಪ್ರತ್ಯಯ ;

(ಎ) ಉ (ಬಿ) ಅನ್ನು (ಸಿ) ಇಂದ (ಡಿ) ಗೆ

35. ಒಬ್ಬರು ಹೇಳಿದ ಮಾತನ್ನೇ ಯಥಾವತ್ತಾಗಿ ಬರೆಯುವಾಗ ಬಳಸುವ ಚಿಹ್ನೆ;

(ಎ) ಪೂರ್ಣವಿರಾಮ ಚಿಹ್ನೆ (ಬಿ) ಅಲ್ಪವಿರಾಮ ಚಿಹ್ನೆ (ಸಿ) ಅರ್ಧವಿರಾಮ ಚಿಹ್ನೆ(ಡಿ) ಉದ್ಧರಣ ಚಿಹ್ನೆ

36. **ಮಕ್ಕಳು ಹಾಲು ಕುಡಿದರಾದ್ದರಿಂದ ಹಲ್ಲುಗಳು ಗಟ್ಟಿಯಾದವು** – ಎಂಬುದು ;

(ಎ) ಸಾಮಾನ್ಯ ವಾಕ್ಯ (ಬಿ) ಸಂಯೋಜಿತ ವಾಕ್ಯ (ಸಿ) ಮಿಶ್ರ ವಾಕ್ಯ (ಡಿ) ಪ್ರಶ್ನಾರ್ಥಕ ವಾಕ್ಯ

37. **' ಬೆಟ್ಟದಾವರೆ '**– ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ:

(ಎ) ಕರ್ಮಧಾರಯ ಸಮಾಸ (ಬಿ) ದ್ವಂದ್ವ ಸಮಾಸ (ಸಿ) ತತ್ಪುರುಷ ಸಮಾಸ (ಡಿ) ಬಹುವ್ರೀಹಿ ಸಮಾಸ

38. **ವಿದ್ಯಾರ್ಥಿಗಳು ಪಾಠವನ್ನು ಬರೆಯಲಿ –** ಈ ವಾಕ್ಯದ ಕ್ರಿಯಾರೂಪ ;

(ಎ) ವಿದ್ಯರ್ಥಕ (ಬಿ) ಸಂಭವನಾರ್ಥಕ (ಸಿ) ನಿಷೇಧಾರ್ಥಕ (ಡಿ) ಬಹುರೂಪಕ

39. **'ದಿವಾನ '** ಪದವು ಈ ಭಾಷೆಯಿಂದ ಕನ್ನಡಕ್ಕೆ ಬಂದಿದೆ:

(ಎ) ಪರ್ಷಿಯನ್ (ಬಿ) ಪೋರ್ಚುಗೀಸ್ (ಸಿ) ಹಿಂದೂಸ್ಥಾನಿ (ಡಿ) ಅರಬ್ಬೀ

40. **'ಇಸವಾಸ '** ಪದದ ಗ್ರಾಂಥಿಕ ರೂಪ ;

(ಎ) ಇಸ್ವಿ (ಬಿ) ಸಹವಾಸ (ಸಿ) ವಿಶ್ವಾಸ (ಡಿ) ವಿಸವಾಸ

**ಕೊಟ್ಟಿರುವ ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಸಂಬಂಧ ಹೊಂದುವ ಪದವನ್ನು ಬರೆಯಿರಿ.** **4x1=4**

41. ಸರಸರ : ಅನುಕರಣಾವ್ಯಯ : : ಈಗೀಗ : ________________

42. ಲೋಪಸಂಧಿ : ಸ್ವರಸಂಧಿ : : ಆದೇಶ ಸಂಧಿ : ____________________

43. ಯುದ್ಧ : ಜುದ್ಧ : : ವಿದ್ಯೆ : ________________

44. ಹರಿಕಾರ : ಮುಂದಾಳು : : ಸುಸಂಗತ : __________________

**ಕೊಟ್ಟಿರುವ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ.** **1x3=3**

45. ಏನು ಹೇಳ್ಳೆ ಕರ್ಣ ಚಿತ್ತ
ಗ್ಲಾನಿ ಯಾವುದು ಮನಕೆ ಕುಂತೀ
ಸೂನುಗಳ ಬೆಸಕ್ಕೆಸಿಕೊಂಬುದು ಸೇರದೇ ನಿನಗೆ ॥

**ಅಥವಾ**

ಪುಟ್ಟಿದ ನೂರ್ವರುಮೆನ್ನೊಡ
ವುಟ್ಟಿದ ನೂರ್ವರುಮಿದಿರ್ಚೆ ಸತ್ತೊಡೆ ಕೋಪಂ

**ಕೊಟ್ಟಿರುವ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣದೊಂದಿಗೆ ಸಮನ್ವಯಿಸಿರಿ.** **1x3=3**

46. ಸಿಡಿಲ ಸಿಡಿದ್ಹಾಂಗ ಗುಂಡು ಸುರಿದಾವ

**ಅಥವಾ**

ಮಾರಿಗೌತಣವಾಯ್ತು ನಾಳಿನ ಭಾರತವು

## ವಿಭಾಗ–ಸಿ

### (ವಾಕ್ಯ ರಚನೆ ಹಾಗೂ ಬರೆವಣಿಗೆ ಕೌಶಲ್ಯ 13 ಅಂಕಗಳು)

47. **ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ.** **1x3=3**

ಅ) ತಾಳಿದವನು ಬಾಳಿಯಾನು

ಆ) ಅತಿಯಾಸೆ ಗತಿಗೇಡು

ಇ) ಕುಂಬಾರನಿಗೆ ವರುಷ ದೊಣ್ಣೆಗೆ ನಿಮಿಷ

**48. ನಿಮ್ಮನ್ನು ಬಳ್ಳಾರಿಯ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ ' ನಮನ ' ಎಂದು ಭಾವಿಸಿಕೊಂಡು, ನಿಮ್ಮ ಶಾಲೆಯಲ್ಲಿ ನಡೆಯುವ ವಿಜ್ಞಾನ ದಿನಾಚರಣೆಗೆ ಅತಿಥಿಯಾಗಿ ಆಗಮಿಸುವಂತೆ ನಿಮ್ಮ ಗ್ರಾಮಪಂಚಾಯಿತಿ ಅಧ್ಯಕ್ಷರಿಗೊಂದು ಮನವಿ ಪತ್ರ ಬರೆಯಿರಿ.** **1x5=5**

**ಅಥವಾ**

**ನಿಮ್ಮನ್ನು ಬೆಂಗಳೂರಿನ ವಿವೇಕಾನಂದ ಪ್ರೌಢಶಾಲೆಯ 'ನೂತನ ' ಎಂದು ಭಾವಿಸಿಕೊಂಡು ನಿಮ್ಮ ಅರ್ಧವಾರ್ಷಿಕ ಪೂರ್ವ ತಯಾರಿ ಕುರಿತು ನಿಮ್ಮ ತಂದೆಗೊಂದು ಪತ್ರ ಬರೆಯಿರಿ**

**49. ಕೊಟ್ಟಿರುವ ವಿಷಯಗಳಲ್ಲಿ ಯಾವುದಾದರೂ ಒಂದನ್ನು ಕುರಿತು ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ.** **1x5=5**

ಅ) ರಾಷ್ಟ್ರೀಯ ಹಬ್ಬಗಳ ಮಹತ್ವ

ಆ) ಸ್ವಚ್ಛ ಭಾರತ ಅಭಿಯಾನ

ಇ) ಪ್ರಾಕೃತಿಕ ವಿಕೋಪ